ಶ್ರೀ ಪಿ. ಜಿ. ಆರ್. ಸಿಂಧ್ಯ.—ಮುಖ್ಯಮಂತ್ರಿಗಳು ಇದ್ದಾರೆ, ಅವರ ಗಮನಕ್ಕೆ ತರಬೇಕಾಗಿದೆ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆಡಳಿತ ಪಕ್ಷದ ಸದಸ್ಯರುಗಳು ಗಂಭೀರ ಸ್ವರೂಪದ ಆಪಾದನೆಗಳನ್ನು ಮಾಡಿದ್ದಾರೆ, ಪತ್ರಿಕೆಗಳಲ್ಲಿ ಕೂಡ ಬಂದಿಯಾಗಿದೆ ೨೫,೦೦೦ ರೂಪಾಯಿಗಳನ್ನು ಕೊಟ್ಟು ವರ್ಗಾವಣೆ ಮಾಡಿಸಿಕೊಳ್ಳಲಾಗಿದೆಯಂತೆ.

(ಗೊಂದಲ)

ಅಧ್ಯಕ್ಷರು.—ತಾವು ನನಗೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ವರ್ಗಾವಣೆಯಲ್ಲಿ ೨೫,೦೦೦ ರೂಪಾಯಿವರೆಗೂ ವ್ಯವಹಾರ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿಯೇ ದೊಡ್ಡ ಗೊಂದಲವಾಗಿದೆ.

(ಗೊಂದಲ)

ಅಧ್ಯಕ್ಷರು.—ನಾನು ಮಾನ್ಯ ಸಿಂಧ್ಯರವರಿಂದ ಇದನ್ನು ನಿರೀಕ್ಷಣೆ ಮಾಡಿರಲಿಲ್ಲ. ಇಂಥ ವಿಚಾರಗಳನ್ನು ಸಭೆಯ ಮುಂದೆ ಪ್ರಸ್ತಾಪ ಮಾಡುವ ಮುನ್ನ ನನಗೆ ಒಂದು ನೋಟೀಸ್ ಕೊಡಬಹುದಾಗಿತ್ತು. ನಾನು೧೦-೩೦ಕ್ಕೆ ಕಛೇರಿಗೆ ಬರುತ್ತೇನೆ. ನನ್ನ ಕಿವಿ ಮೇಲೆ ಇಂಥ ವಿಚಾರ ಪ್ರಸ್ತಾಪ ಮಾಡುತ್ತೇನೆಂದು ಹೇಳಿದರೆ, ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕೂಡ ಇಂಥ ವಿಚಾರ ಪ್ರಸ್ತಾಪಕ್ಕೆ ಬರಬಹುದು ಎಂದು ತಿಳಿಸಬಹುದು. ಇಷ್ಟರ್ತು ತಾವು ನನ್ನನ್ನು ಭೇಟಿ ಮಾಡಿದ್ದಿರಿ, ಆದರೆ ಇಂಥ ವಿಚಾರ ಪ್ರಸ್ತಾಪ ಮಾಡುತ್ತೇನೆಂದು ತಿಳಿಸಲಿಲ್ಲ. ನನಗೆ ಖಾತರಿ ಇದೆ, ಏನೆಂದರೆ ತಾವು ಪ್ರಸ್ತಾಪ ಮಾಡತಕ್ಕ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ತಮಗೂ ಒಪ್ಪಿಗೆ ಇಲ್ಲವೆಂದು.

ಶ್ರೀ ಪಿ. ಜಿ. ಆರ್, ಸಿಂಧ್ಯ.—ನನ್ನ ಒಪ್ಪಿಗೆ ಇದೆ. ತಮ್ಮನ್ನು ಭೇಟಿಯಾದ ಸಂದರ್ಭದಲ್ಲಿ ನಾನು ಪ್ರಜಾವಾಣಿ ಪತ್ರಿಕೆ ಓದಿರಲಿಲ್ಲ. ಮುಖ್ಯಮಂತ್ರಿಗಳು ಈಗ ಸದನದಲ್ಲಿ ಇದ್ದಾರೆ,

MR SPEAKER.—I will not allow.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇನ್ನೇ ತಾರೀಖಿನಿಂದ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರೂ ಸಹ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಇಡೀ ರಾಜ್ಯದ ಗಮನವನ್ನು ಸೆಳೆದಿರುವಂತಹ ವಿಚಾರವೆಂದರೆ ವರ್ಗಾವಣೆ ವಿಚಾರ.

MR SPEARER.—I am not allowing the Cheif Minister to make a statement.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮನವಿ ಸಲ್ಲಿಸುತ್ತಿದ್ದೇವೆ.

ಅಧ್ಯಕ್ಷರು.—ಬರೆದುಕೊಡಿ, ಅದನ್ನು ಯಾವ ರೀತಿಯಲ್ಲಿ ಸದನದ ಮುಂದೆ ಇಡಬೇಕೆಂದು ತೀರ್ಮಾನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಪತ್ರಿಕೆಗಳಲ್ಲಿ ಬಂದಿರುವ ವಿಚಾರ, ತಮ್ಮ ಗಮನಕ್ಕೂ ಬಂದಿದೆ. ಸರ್ಕಾರದ ಪರವಿಯಿಂದ ಉತ್ತರ ಕೊಡಿಸಿ. ಇಷ್ಟರ್ತು ಬೆಳಿಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಭಾರೀ ಗೊಂದಲವಾಗಿದೆಯಂತೆ.

ಗಮನ ಸೆಳೆಯುವ ಸೂಚನೆ

ರಾಜ್ಯದಲ್ಲಿ ೯೦–೯೧ನೇ ಸಾಲಿಗೆ ಉಚಿತ ಪಠ್ಯ ಪುಸ್ತಕಗಳನ್ನು ಕಾಲಕ್ಕೆ ಸರಿಯಾಗಿ ವಿತರಣೆ ಮಾಡದೇ ಇರುವುದು

ಶ್ರೀ ಎ. ರಾಮಸ್ವಾಮಿ.—ಸ್ವಾಮಿ, ರಾಜ್ಯದಲ್ಲಿ ೧೯೯೦–೯೧ನೇ ಸಾಲಿಗೆ ಉಚಿತ ಪಠ್ಯ ಪುಸ್ತಕಗಳನ್ನು ಕಾಲಕ್ಕೆ ಸರಿಯಾಗಿ ವಿತರಣೆ ಮಾಡದೇ ಇರುವುದರಿಂದ ವಿದ್ಯಾರ್ಥಿಗಳಿಗೆ ಆಗಿರತಕ್ಕ ತೊಂದರೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್(ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

ರಾಜ್ಯದಲ್ಲಿ ೧೯೯೦-೯೧ನೇ ಸಾಲಿಗೆ ಹಳೆಪತ್ಯ ವಸ್ತು ಮತ್ತು ಪತ್ಯ ಪುಸ್ತಕಗಳನ್ನು ಮುಂದುವರಿಸಲಾಗಿದೆ. ಸರ್ಕಾರಿ ಮುದ್ರಿತ ಪತ್ಯ ಪುಸ್ತಕಗಳ ಹಂಚಿಕೆ ಮತ್ತು ವಿತರಣೆಯನ್ನು ಎಂದಿನಂತೆ ೧೯೯೦-೯೧ನೇ ಸಾಲಿಗೆ ಕರ್ನಾಟಕ ಸರ್ಕಾರಿ ಗ್ರಾಹಕರ ಮಹಾ ಮಂಡಳಿಯವರ ಮೂಲಕ ಮಾಡಲಾಗುವುದು,

ರಾಜ್ಯದ ಜಿಲ್ಲಾ ಮಳಿಗೆಗಳು ಮತ್ತು ಪುಸ್ತಕ ವಿತರಣಾ ನಾಮಿನಿಗಳ ಬಳಿ ಹಳೇ ಪುಸ್ತಕಗಳು ಶೇಷದ ಳಿರಪ್ಪು ದಾಸ್ತಾನಿದ್ದು ಅವುಗಳನ್ನು ಮಕ್ಕಳಿಗೆ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿರುತ್ತದೆ. ಬೇಡಿಕೆಯಿರುವ ಸುಮಾರು ೧.೭೦ ಕೋಟಿ ಪತ್ಯಪುಸ್ತಕಗಳ ಪುನರ್ ಮುದ್ರಣದ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಮುಕ್ತ ಮಾರುಕಟ್ಟೆಯಿಂದ ೨,೦೦೦ ಎಂ. ಟಿ. ಕಾಗದ ವನ್ನು ಖರೀದಿಸಲಾಗಿದೆ.

ದಾಸ್ತಾನಿರುವ ಪತ್ಯ ಪುಸ್ತಕಗಳನ್ನು ಉಪಯೋಗಿಸಿ ಪಾಠ ಪ್ರವಚನಗಳನ್ನು ಮುಂದುವರಿಸಬಹುದಾಗಿದೆ. ಬೇಡಿಕೆಯಿರುವ ಪತ್ಯ ಪುಸ್ತಕಗಳನ್ನು ಮುದ್ರಿಸಿ, ನಿರಂತರವಾಗಿ ಒದಗಿಸುವ ವಿರ್ಪಾಡು ಮಾಡಲಾಗಿದೆ.

ಶ್ರೀ ಎ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ ಎಂಬ ಉತ್ತರ ವನ್ನು ಮಾನ್ಯ ಸಚಿವರು ಓದಿಗಿಸಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಆದರೆ ಇದು ರಸ್ತೆ ರಿಪೇರಿ, ಮೋರಿ ರಿಪೇರಿ ಪ್ರಶ್ನೆ ಅಲ್ಲ, ಇದು ರಾಜ್ಯದ ಲಕ್ಷಾಂತರ ಮಕ್ಕಳ ಭವಿಷ್ಯದ ಪ್ರಶ್ನೆ. ಈ ವಿಚಾರ ಸರ್ಕಾರಕ್ಕೆ ಗೊತ್ತಿರಲಿಲ್ಲವೇ ? ಈ ವಿಚಾರ ಸರ್ಕಾರಕ್ಕೆ ಗೊತ್ತಿದ್ದರೆ ಏತಕ್ಕೆ ಮೊದಲೇ ಕ್ರಮ ಕೈಗೊಳ್ಳಲಿಲ್ಲ. ಇವೊತ್ತು ಇದರಿಂದ ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳಿಗೆ ಶಿಕ್ಷೆ ಆಗುತ್ತದೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗ ಪುಸ್ತಕವನ್ನು ಮಕ್ಕಳಿಗೆ ಒಂದು ಸಾರಿ ಒದಗಿಸಲಾಗುತ್ತದೆ. ಆ ಮಕ್ಕಳಿಗೆ ಕೊಟ್ಟ ಪುಸ್ತಕವನ್ನು ಅವರು ಏನಾದರೂ ಹಾಳುಮಾಡಿಕೊಂಡರೆ, ಅಥವಾ ಹರಿದುಹಾಕಿಕೊಂಡರೆ, ಮತ್ತೆ ಮಕ್ಕಳಿಗೆ ಪುಸ್ತಕಗಳು ಸಿಕ್ಕುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಗಮನಹರಿಸಿ ಪುನರ್ ಆಲೋಚನೆ ಮಾಡಿ ಬೇರೆ ವ್ಯವಸ್ಥೆ ಮಾಡುವಂತಾದ್ದು ಸರ್ಕಾರದ ಆಲೋಚನೆಯಲ್ಲಿದೆಯೋ ಎನ್ನುವುದನ್ನು ಶಿಕ್ಷಣ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ಪುಸ್ತಕಗಳು ಮುದ್ರಣ ಆಗುವುದರಲ್ಲಿ ಸ್ವಲ್ಪ ತಡವಾಗಿದೆ. ಇದಕ್ಕೆ ಕಾರಣ ಏನೆಂದರೆ, ಸುಮಾರು ಐದುಸಾವಿರ ಮೆಟ್ರಿಕ್ ಟನ್ ಕಾಗದವನ್ನು ಖರೀದಿ ಮಾಡಬೇಕಾಗುತ್ತದೆ ಸರ್ಕಾರ ಅದರ ಬಗ್ಗೆ ಎಲ್ಲಾ ಕ್ರಮ ತೆಗೆದುಕೊಂಡಿದೆ. ಆದರೆ ಹಿಂದೂಸ್ತಾನ್ ಪೇಪರ್ ಕಾರ್ಪೊರೇಷನ್ ಕನ್ಸೇಷನ್ ರೇಟಿನಲ್ಲಿ ಕಾಗದವನ್ನು ಕೊಡಬೇಕು. ಆದರೆ ಅವರು ಸಕಾಲದಲ್ಲಿ ಕೊಡಲಿಲ್ಲ. ಭಾರತದಲ್ಲಿ ಎಲ್ಲಾ ಕಡೆ ಅವರೇ ಸಪ್ಲೈ ಮಾಡುತ್ತಾರೆಂದು ನನಗೆ ತಿಳಿದುಬಂದಿದೆ ನಾವು ಮೊನ್ನೆ, ಮೊನ್ನೆಯವರೆಗೂ ಕೂಡ ಕಾಗದ ಬರಬಹುದೆಂದು ನಿರೀಕ್ಷಣೆ ಮಾಡಿದ್ದೆವು. ಆದರೆ ಬರಲಿಲ್ಲ. ಈ ರೀತಿಯಿಂದಾಗಿ, ಅನಿವಾರ್ಯವಾಗಿ ಸರ್ಕಾರ ಮೊನ್ನೆ ಮುಕ್ತ ಮಾರುಕಟ್ಟೆಯಲ್ಲಿ ಕಾಗದವನ್ನು ತೆಗೆದುಕೊಳ್ಳತಕ್ಕ ಪರಿಸ್ಥಿತಿಗೆ ತಳ್ಳಲ್ಪಟ್ಟಿತು. ಸರ್ಕಾರ ಈ ತೀರ್ಮಾನ ತೆಗೆದುಕೊಂಡರುವುದೇ ಅಲ್ಲ, ಖರೀದಿ ಕೂಡ ಆಗಿದೆ. ಇನ್ನು ೮-೧೦ನೇ ತಾರೀಖಿನ ಹೊತ್ತಿಗೆ ಪುಸ್ತಕಗಳನ್ನು ಎಲ್ಲಾ ಕಡೆ ಒದಗಿಸಲಾಗುತ್ತದೆ. ಸುಮಾರು ೧.೭೦ ಕೋಟಿ ಪುಸ್ತಕಗಳು ನಮ್ಮಲ್ಲಿ ಇವೆ ಎಂಬ ವಿವರಗಳನ್ನು ಸಭೆಯಮುಂದೆ ಇಟ್ಟಿದ್ದೇನೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಪ್ರತಿ ತಿಂಗಳು ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಅಧಿಕಾರಿಗಳನ್ನು ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ವ್ಯವಹರಿಸಲು ಕಳುಹಿಸಿಕೊಟ್ಟಿದ್ದೇವೆ ಹೀಗಾಗಿ, ಎಲ್ಲಾ ಪ್ರಯತ್ನ ವನ್ನು ಮಾಡಿದರೂ ಕೂಡ ನಾವು ಏನು ಒಂದು ನಿರ್ದಿಷ್ಟ ದಲ್ಲಿ ಅನುಕೂಲವಾಗುತ್ತದೆಂದು ಬಯಸಿದ್ದೆವು ಹಾಗೆ ಆಗಲಿಲ್ಲ. ಅನಿವಾರ್ಯವಾಗಿ ಸರ್ಕಾರ ಇವೊತ್ತು ಬೇಕಡ ೧೬ ಕೋಟಿ ರೂಪ್ಪು ಹಣ ವಿರ್ಚುಮಾಡ ತಕ್ಕ ಪರಿಸ್ಥಿತಿಗೆ ಬಂದಿದೆ. ಸರ್ಕಾರ ಅದ್ಯತೆಕೊಟ್ಟು ಹಣ ಒದಗಿಸಿ, ಸುಮಾರು ಎರಡು ಸಾವಿರ ಮೆಟ್ರಿಕ್ ಟನ್ ಕಾಗದವನ್ನು ಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಹೊಸ ಪುಸ್ತಕ ಮುದ್ರಣ ಆಗಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರದ ಹೊಸ ವಿದ್ಯಾ ನೀತಿ ಜಾರಿಗೆ ಬರದೇ ಇರುವುದರಿಂದ ಈ ವರ್ಷ ಹೊಸ ಪದ್ಧತಿ ಬೇಡ ಎಂದೂ ತೀರ್ಮಾನ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ ಇದು ಮೋರಿ, ರಸ್ತೆ ಕೆಲಸ ಅಲ್ಲ ಎಂದು ಹೇಳಿದರು. ಇದು ವಿದ್ಯಾ ಇಲಾಖೆಗೆ ಸಂಬಂಧಪಟ್ಟ ವಿಚಾರ ಎಂಬುದು ನನ್ನ ಗಮನದಲ್ಲಿದೆ. ನಾವು ಇದನ್ನು ಲಘುವಾಗಿ ತೆಗೆದುಕೊಂಡಿಲ್ಲ. ಎಲ್ಲಾ ರೀತಿಯ ಕ್ರಮ ಗಳನ್ನೂ ತೆಗೆದುಕೊಂಡಿದ್ದೇವೆ. ಇನ್ನು ೧೦-೧೨ನೇ ತಾರೀಖಿನ ಹೊತ್ತಿಗೆ ಎಲ್ಲಾ ಊರುಗಳಿಗೂ ಪುಸ್ತಕ ತಲುಪುವ ರೀತಿಯಲ್ಲಿ ಕೆಲಸ ಮಾಡುತ್ತೇವೆ.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗಾಗಲೇ ೧.೭೦ ಕೋಟಿಯಷ್ಟು ಪುಸ್ತಕಗಳನ್ನು ಸಪ್ಲೈ ಮಾಡಿದ್ದೇವೆಂದು ಹೇಳಿದರು. ಈಗ ಶೇಕಡಾ ೫೦ ರಷ್ಟು ಪಾಠಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ಇನ್ನೂ ಒದಗಿಸಿಲ್ಲ. ಪಠ್ಯಪುಸ್ತಕ ಆಫೀಸ್ ಅಲ್ಲ, ಲೇಖಿಕ್ ಪುಸ್ತಕಗಳನ್ನು ಸಹ ಬಹಳಷ್ಟು ಸ್ಕೂಲುಗಳಿಗೆ ಒದಗಿಸಿಲ್ಲ. ಪಾಠಶಾಲೆಗಳಿಗೆ ಮಕ್ಕಳು ಬರೀ ಕೈಯಲ್ಲಿ ಹೋಗಿ ಬರುತ್ತಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಚಿವರಿಗೆ ಈ ತರಹ ಪೇಪರ್ ಸಿಕ್ಕುತ್ತಿಲ್ಲ ಎನ್ನುವ ಬಗ್ಗೆ ನಾನು ಮೂರು ತಿಂಗಳ ಕೆಳಗೆ ಕಾಗದವನ್ನು ಬರೆದಿದ್ದೆ, ಪಾಠಶಾಲೆಗಳು ಪ್ರಾರಂಭವಾಗುವ ಹೊತ್ತಿಗೆ ಪುಸ್ತಕಗಳು ಸಿಕ್ಕದೆ, ಮಕ್ಕಳು ಬಹಳ ತೊಂದರೆ ಪಡುತ್ತಾರೆ, ಪುಸ್ತಕಗಳು ಮಾರುಕಟ್ಟೆಯಲ್ಲಿ ಸಿಕ್ಕುವಂಥ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದೆ. ಆದರೂ ಕ್ರಮ ತೆಗೆದುಕೊಳ್ಳಲಿಲ್ಲ. ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಮಾತನಾಡುವಾಗ ಕೆಲವು ಮಕ್ಕಳು ಪುಸ್ತಕಗಳನ್ನು ಕಳೆದುಕೊಳ್ಳುತ್ತಾರೆ, ಕೆಲವರು ಹಾಳು ಮಾಡಿಕೊಳ್ಳುತ್ತಾರೆ, ಅಂತಹವರಿಗೆ ಮಾರುಕಟ್ಟೆಯಲ್ಲಿ ಪುಸ್ತಕಗಳು ಸಿಕ್ಕುವುದಿಲ್ಲ. ಅವರು ಯಾರಿಂದ ಕೊಂಡುಕೊಳ್ಳಬೇಕು ಎಂದು ಪ್ರಶ್ನೆ ಮಾಡಿ ಕೇಳಿದರು. ಪುಸ್ತಕಗಳನ್ನು ಕಳೆದುಕೊಂಡ ಮಕ್ಕಳು ಅಧೋಗತಿಯಾಗುತ್ತಾರೆ, ಅವರಿಗೆ ಕಷ್ಟವಾಗುತ್ತದೆ, ಆ ರೀತಿ ಪುಸ್ತಕಗಳನ್ನು ಕಳೆದುಕೊಂಡಂಥ ಮಕ್ಕಳಿಗೆ ಪುಸ್ತಕಗಳನ್ನು ಒದಗಿಸಲಿಕ್ಕೆ ವಿಶೇಷವೂ ಬೇರೆ ವ್ಯವಸ್ಥೆ ಮಾಡಿದ್ದಾರೆಯೇ ಎಂದು ಮಾನ್ಯ ವಿದ್ಯಾ ಸಚಿವರಲ್ಲಿ ಕೇಳುತ್ತೇನೆ?

ಶ್ರೀ ಕೆ.ಹೆಚ್. ರಂಗನಾಥ್.—ನಾನು ಆಗಲೇ ಇದರ ಬಗ್ಗೆ ಹೇಳಿದ್ದೇನೆ. ಪ್ರಿಂಟ್ ಮಾಡಬೇಕಾಗಿರತಕ್ಕಂತಹ ಪುಸ್ತಕಗಳ ಸಂಖ್ಯೆ ೧.೭೦ ಕೋಟಿಯಷ್ಟು, ಮಾತ್ರ ಆ ಕೆಲಸ ನಡೆಯುತ್ತಿದೆ. ತಾವು ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಮಕ್ಕಳಿಗೆ ಯಾವುದೇ ರೀತಿಯಂತೊಂದರೆಯಾಗದ ರೀತಿಯಲ್ಲಿ ಪುಸ್ತಕದ ಪೂರೈಕೆ ಆಗುವುದಕ್ಕೆ ಸರಕಾರ ಪ್ರಯತ್ನ ಪಡುತ್ತದೆ.

೨. ಮುಳಬಾಗಿಲಿನಲ್ಲಿ ದಿನಾಂಕ ೨೦-೫-೯೦ ರಂದು ಉಂಟಾದ ಗುಂಪು ಘರ್ಷಣೆಯಿಂದ ನಷ್ಟಕ್ಕೊಳಗಾದವರಿಗೆ ಪರಿಹಾರ ನೀಡುವಂತೆ ಒತ್ತಾಯ

ಶ್ರೀ ಎಂ.ವಿ. ವೆಂಕಟಪ್ಪ.—ದಿನಾಂಕ ೨೦-೫-೯೦ ರಂದು ಮುಳಬಾಗಿಲಿನಲ್ಲಿ ಉಂಟಾದ ಗುಂಪು ಘರ್ಷಣೆಯಿಂದ ಜನರಿಗೆ ಉಂಟಾಗಿರುವ ನಷ್ಟದ ಬಗ್ಗೆ ಪರಿಹಾರ ನೀಡಲು ಸರಕಾರದವರು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸದರಿ ಗಲಭೆಯಲ್ಲಿ ಜನರ ಆಸ್ತಿ ಪಾಸ್ತಿಗಳಿಗೆ ಸುಮಾರು ರೂ. ೨೧,೯೦,೬೩೫-೦೦ ಗಳಷ್ಟು ನಷ್ಟ ಉಂಟಾಗಿದ್ದು ಈಗಾಗಲೇ ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳು ಸರ್ಕಾರಿ ಆದೇಶ ಸಂ. ಹೆಚ್.ಡಿ. ೨೨೮ ಎಸ್.ಎಸ್.ಟಿ ೮೯, ದಿನಾಂಕ ೨೫-೧೦-೯೦ ರ ಆನ್ವಯ ೧೪ ಜನರಿಗೆ ರೂ. ೧೬,೪೦೦-೦೦ ಗಳ ಮೊತ್ತದ ಪರಿಹಾರವನ್ನು ಮಂಜೂರು ಮಾಡಿರುತ್ತಾರೆ. ಅದೇ ರೀತಿ ಉಳಿದ ೬೭ ಜನರಿಗೆ ರೂ. ೫,೧೮,೬೦೩-೦೦ ಗಳ ಒಟ್ಟು ಮೊತ್ತದ ಪರಿಹಾರವನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುವ ಪ್ರಕಾರ ಪರಿಹಾರ ಮಂಜೂರು ಮಾಡಲಾಗಿದೆ.

ಶ್ರೀ ಎಂ. ವಿ. ವೆಂಕಟಪ್ಪ.— ಕಂದಾಯ ಅಧಿಕಾರಿಗಳ ಅಂದಾಜಿನ ಪ್ರಕಾರ ೨೧೪ ಕೇಸುಗಳಿವೆ ಎಂದು ಇದ್ದು ಅವರು ೩೮.೭೮,೪೫೫ ರೂಪಾಯಿ ಪರಿಹಾರ ಕೊಡಬೇಕೆಂದು ಅಂದಾಜು ಮಾಡಿದ್ದಾರೆ. ಆದರೆ ಜಿಲ್ಲಾಧಿಕಾರಿಗಳು ೫,೧೪,೬೦೩ ರೂಪಾಯಿಗಳು ಎಂದು ಅಂದಾಜು ಮಾಡಿದ್ದಾರೆಂದು ಇದರಲ್ಲಿದೆ. ಇದರಲ್ಲಿ ಯಾವುದು ಸರಿ ಎಂಬುದನ್ನು ತಿಳಿಸಬೇಕು. ಇದರ ಜೊತೆಗೆ ಪರಿಹಾರವನ್ನು ಕೊಡಲಿಕ್ಕೆ ತಾವು ಹಾಕಿಕೊಂಡಿರುವಂತಹ ಗೈಡ್‌ಲೈನ್ಸ್ ಏನು? ತಾತ್ಕಾಲಿಕ ಪರಿಹಾರವನ್ನೇನಾದರೂ ಕೊಟ್ಟಿದ್ದೀರಾ? ರೆವಿನ್ಯೂ ಅಧಿಕಾರಿಗಳ ಅಂದಾಜಿನ ಪ್ರಕಾರ ಏನು ೩೮.೭೮ ಲಕ್ಷಕ್ಕೆ ರೂಪಾಯಿ ಪರಿಹಾರ ಕೊಡಬೇಕೆಂದು ಇದೆ ಅದನ್ನು ಆದಷ್ಟು ಬೇಗ ಕೊಡುವ ಪ್ರಯತ್ನ ಪಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.— ನಮಗೆ ಬಂದಿರುವ ವರದಿ ಪ್ರಕಾರ ಏನು ವಿವರವಿದೆ, ಅದನ್ನು ನಾನು ಇಲ್ಲಿ ಓದುತ್ತೇನೆ. ೨೧೯೦,೬೩೫ ರೂಪಾಯಿಗಳಷ್ಟು ಆಸ್ತಿಪಾಸ್ತಿಗಳು ಹಾನಿಯಾಗಿವೆ ಎಂದು ಅಂದಾಜು ಮಾಡಿದ್ದಾರೆ. ಅದರಲ್ಲಿ ಸ್ವಲ್ಪ ಹಣವನ್ನು ಅಂದರೆ ಜಿಲ್ಲಾಧಿಕಾರಿಯವರು ಎಷ್ಟು ಕೊಡಲು ಅಧಿಕಾರ ಇದೆಯೋ ಅಷ್ಟು ಹಣವನ್ನು ಕೊಟ್ಟಿದ್ದಾರೆ. ಇನ್ನು ೫,೧೮,೬೦೩ ರೂಪಾಯಿಗಳ ಪರಿಹಾರವನ್ನು ಮಂಜೂರು ಮಾಡಬೇಕೆಂದು ಪ್ರಪೋಸಲ್ ಕಳಿಸಿದರು, ಅದನ್ನು ಇದೇ ಮೂರನೇ ತಾರೀಖು ಮಂಜೂರು ಮಾಡಿದ್ದೇವೆ. ಆ ದುಡ್ಡು ಕೊಡಿಸಿಗುತ್ತದೆ. ಪರಿಹಾರವನ್ನು ಯಾವ ರೀತಿ ಕೊಡಬೇಕೆಂಬ ಬಗ್ಗೆ ಗೈಡ್‌ಲೈನ್ಸ್ ಇದೆ ಅದನ್ನು ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.